# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೧೨

### ಚಿಕಾಗೋ ನಗರದ ಸುತ್ತಮುತ್ತ

ಸರ್ವಧರ್ಮ ಸಮ್ಮೇಳನದ ನಂತರ ಸ್ವಾಮಿ ವಿವೇಕಾನಂದರು ಏನು ಮಾಡಿದರು ಎಂಬುದರ ಬಗ್ಗೆ ಅನೇಕ ವಿವರಗಳು ಹೊರಹೊಮ್ಮಿವೆ. ಆದರೆ ಅವೆಲ್ಲವೂ ಸಂಪೂರ್ಣವಾದ ಚಿತ್ರಣವನ್ನು ನಮಗೆ ನೀಡುವುದಿಲ್ಲ. ಆದರೆ ಸ್ವಾಮಿ ವಿವೇಕಾನಂದರು ಪ್ರೊ. ಜಾನ್ ಹೆನ್ರಿ ರೈಟ್ ಅವರಿಗೆ ಅಕ್ಟೋಬರ್ ೨, ೧೮೯೩ರಂದು ಹೀಗೆ ಬರೆಯುತ್ತಾರೆ: ''ನಾನು ಇಷ್ಟು ಕಾಲ ನಿಮಗೆ ಕಾಗದ ಬರೆಯದೆ ಇರುವುದನ್ನು ನೋಡಿ, ನೀವು ನನ್ನ ವಿಷಯವಾಗಿ ಏನು ಭಾವಿಸಿರುವಿರೋ ನನಗೆ ತಿಳಿಯದು. ಮೊದಲನೆಯದಾಗಿ, ನಾನು ಕೊಟ್ಟಕೊನೆಗೆ ನಿಮ್ಮ ಸಹಾಯದಿಂದಲೇ ಸರ್ವಧರ್ಮ ಸಮ್ಮೇಳನವನ್ನು ತಲುಪಿದೆ. ಸಭೆಯನ್ನು ಉದ್ದೇಶಿಸಿ ಮಾತನಾಡುವುದಕ್ಕೆ ನಾನು ಮೊದಲೇ ಸಿದ್ಧತೆ ನಡೆಸಿರಲಿಲ್ಲ. ಈ ಸಿದ್ಧತೆಯಲ್ಲಿಯೇ ಸಮಯವೆಲ್ಲ ಕಳೆದು ಹೋಗುತ್ತಿತ್ತು.''

ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ಸಮಯದಲ್ಲಿ ಲಯಾನ್ ಎಂಬ ದಂಪತಿಗಳ ಮನೆಯಲ್ಲಿ ವಾಸ್ತವ್ಯವನ್ನು ಹೂಡಿದ್ದರು. ಇವರ ಮೊಮ್ಮಗಳ ಹೆಸರು ಕಾರ್ನೆಲಿಯಾ ಕಾಂಗರ್. ಅವಳು ಆ ಸಮಯದಲ್ಲಿ ಸ್ವಾಮೀಜಿಯವರ ದರ್ಶನವನ್ನು ಪಡೆದುಕೊಂಡಿದ್ದಳು. ಆಗ ಆಕೆಗೆ ಬರಿ ೬ ವರ್ಷ. ಅವಳ ನೆನಪುಗಳು ಮೊಟ್ಟಮೊದಲು 'ಪ್ರಬುದ್ಧಭಾರತ' ಪತ್ರಿಕೆಯ ಮೇ ೧೯೫೬ರ ಸಂಚಿಕೆಯಲ್ಲಿ ಪ್ರಕಟವಾದುವು. ಆಕೆಗೆ ೮೪ ವರ್ಷವಾದಾಗ ಚಿಕಾಗೋ ವೇದಾಂತ ಕೇಂದ್ರದಲ್ಲಿ ಆಕೆ ತನ್ನ ನೆನಪುಗಳನ್ನು ಮತ್ತೆ ತೋಡಿಕೊಂಡಳು. ಆಕೆ ಹೀಗೆ ಹೇಳಿದಳು: ''ಅವುಗಳು ನಾನು ಮರೆಯಲಾಗದ ನೆನಪುಗಳು. ಸ್ವಾಮೀಜಿಯವರದು ಅತ್ಯಂತ ಅಸಾಧಾರಣವಾದ, ಅಯಸ್ಕಾಂತದಂತೆ ಆಕರ್ಷಿಸುವ ವ್ಯಕ್ತಿತ್ವ. ಅವರ ಚಿತ್ರಣ ನನ್ನ ಮನಸ್ಸಿನಲ್ಲಿ, ನೆನ್ನೆ ಮೊನ್ನೆಯದರ ರೀತಿಯಲ್ಲಿ ಎಂದಿಗೂ ಅಚ್ಚಳಿಯದೆ ನಿಂತಿದೆ. ಅವರಂತೆ ಇರುವವರನ್ನು ನಾನು ಎಂದೆಂದಿಗೂ ಕಂಡಿಲ್ಲ.''

ಅವಳು ಮುಂದುವರಿದು ಹೇಳುತ್ತಾಳೆ: ''೧೮೯೩ರಲ್ಲಿ ಸರ್ವಧರ್ಮ ಸಮ್ಮೇಳನವು ನಡೆಯಿತು. ಇದಕ್ಕೆ ಬರುವ ಪ್ರತಿನಿಧಿಗಳಿಗೆ ಹಲವಾರು ಮನೆಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅಂಥ ಮನೆಗಳಲ್ಲಿ ನನ್ನ ತಾತ ಮತ್ತು ಅಜ್ಜಿಯಾದ ಮಿಸ್ಟರ್ ಮತ್ತು ಮಿಸೆಸ್ ಲಯಾನ್ ಅವರ ಮನೆಯೂ ಒಂದಾಗಿತ್ತು. ನನ್ನ ತಾತನಿಗೆ ಕಂದಾಚಾರದವರೆಂದರೆ ಇಷ್ಟವಾಗುತ್ತಿರಲಿಲ್ಲ. ಅವರು ಉದಾರಬುದ್ಧಿಯವರಾಗಿದ್ದರು. ತತ್ತ್ವಶಾಸ್ತ್ರದಲ್ಲಿ ಆಸಕ್ತಿ ಉಳ್ಳವರಾಗಿದ್ದರು. ನಮ್ಮ ಮನೆ ಚಿಕಾಗೋದ ಮಿಚಿಗನ್ ರಸ್ತೆಯಲ್ಲಿ ಇತ್ತು. ಅದೊಂದು ಸುಂದರವಾದ ಹಳೆಯ ಮಾದರಿಯ ಮನೆ. ಆ ಬೇಸಿಗೆಕಾಲದಂದು ಮನೆಯು ಅತಿಥಿಗಳಿಂದ ತುಂಬಿ ತುಳುಕುತ್ತಿತ್ತು. ನಮ್ಮ ತಾತ ಮತ್ತು ಅಜ್ಜಿ ಬಹಳ ಒಳ್ಳೆಯ ಆತಿಥ್ಯವನ್ನು ನೀಡುತ್ತಿದ್ದರು. ಒಂದು ಸಾಯಂಕಾಲ ಸರ್ವಧರ್ಮ ಸಮ್ಮೇಳನದ ಒಬ್ಬ ಪ್ರತಿನಿಧಿಯು ಆಗಮಿಸುವರು ಎಂದು ನಮಗೆಲ್ಲ ಗೊತ್ತಾಯಿತು. ಮನೆಯಲ್ಲಿ ಜನವೋ ಜನ. ಹೀಗಾಗಿ ನನ್ನ ಅಜ್ಜಿ ತನ್ನ ಹಿರಿಯ ಮಗನನ್ನು ಸ್ನೇಹಿತರೊಬ್ಬರ ಮನೆಗೆ ಕಳಿಸಿಬಿಟ್ಟಳು! ಆ ಕೊಠಡಿಯನ್ನು ಬರಲಿರುವ ಅತಿಥಿಗಾಗಿ ಕಾಯ್ದಿರಿಸಿದಳು. ಆ ಅತಿಥಿಯ ಬಗ್ಗೆ ನಮಗೆ ಏನೂ ಗೊತ್ತಿರಲಿಲ್ಲ. ಅವರು ಯಾವ ಧರ್ಮವನ್ನು ಪ್ರತಿನಿಧಿಸುತ್ತಾರೆ ಎನ್ನುವುದೂ ತಿಳಿದಿರಲಿಲ್ಲ. ಆದರೆ ಅವರು ಮಧ್ಯರಾತ್ರಿಯ ಸುಮಾರಿಗೆ ಬರುವರೆಂದು ನಮಗೆ ಸಂದೇಶವೊಂದು ಬಂದಿತು. ನಮ್ಮ ಅಜ್ಜಿಯ ಹೊರತಾಗಿ ಎಲ್ಲರೂ ನಿದ್ದೆ ಮಾಡುತ್ತಿದ್ದರು. ಮಧ್ಯರಾತ್ರಿಯ ಹೊತ್ತಿಗೆ ಕರೆಗಂಟೆಯ ಶಬ್ದ ಕೇಳಿಸಿತು. ನಮ್ಮ ಅಜ್ಜಿ ಬಾಗಿಲನ್ನು ತೆರೆದಾಗ, ಸ್ವಾಮಿ ವಿವೇಕಾನಂದರು ಅಲ್ಲಿ ನಿಂತಿದ್ದರು. ಉದ್ದನೆಯ ಹಳದಿಬಣ್ಣದ ಪೋಷಾಕನ್ನು ಧರಿಸಿದ್ದರು. ಕೆಂಪು ಬಣ್ಣದ ರುಮಾಲನ್ನು ಸುತ್ತಿಕೊಂಡಿದ್ದರು. ಅದೇ ಬಣ್ಣದ ಬಟ್ಟೆಯನ್ನು ಸೊಂಟದ ಸುತ್ತಲೂ ಕಟ್ಟಿಕೊಂಡಿದ್ದರು. ಇದು ನನಗೆ ಆಶ್ಚರ್ಯಜನಕ ದೃಶ್ಯವಾಗಿತ್ತು. ಇದುವರೆಗೂ ನಾನು ಪೂರ್ವದೇಶದವರನ್ನು ನೋಡಿರಲೇ ಇಲ್ಲ. ನನ್ನ ಅಜ್ಜಿಯು ಅವರನ್ನು ಹಾರ್ದಿಕವಾಗಿ ಸ್ವಾಗತಿಸಿದಳು. ಅವರಿಗೆ ಮೀಸಲಾಗಿಟ್ಟ ಕೊಠಡಿಯನ್ನು ತೋರಿಸಿದಳು. ಆದರೆ ಮಲಗುವುದಕ್ಕೆ ಹೋಗುವಾಗ ಆಕೆಗೆ ಒಂದು ಚಿಂತೆ ಕಾಡಿತು. ಆಕೆಯ ಮನೆಗೆ ಬಂದಿದ್ದ ಬಹುತೇಕ ಅತಿಥಿಗಳು ದಕ್ಷಿಣ ಅಮೆರಿಕದವರು. ಅಲ್ಲಿನ ನಿವಾಸಿಗಳಿಗೆ ಶ್ವೇತವರ್ಣೀಯರನ್ನು ಬಿಟ್ಟು ಉಳಿದವರನ್ನು ಕಂಡರೆ ಅಸಡ್ಡೆ; ಅವರೊಡನೆ ಬೆರೆಯುತ್ತಿರಲಿಲ್ಲ. ಆದರೆ ನನ್ನ ತಾತ ಮತ್ತು ಅಜ್ಜಿ ಹಾಗಿರಲಿಲ್ಲ.

''ಬೆಳಗ್ಗೆ ನನ್ನ ತಾತ ಎದ್ದ ಕೂಡಲೇ, ಈ ಸೂಕ್ಷ್ಮವಿಚಾರವನ್ನು ನನ್ನ ಅಜ್ಜಿಯು ಆತನಿಗೆ ಹೇಳಿದಳು. ಸ್ವಾಮೀಜಿ ಮತ್ತು ಉಳಿದ ಅತಿಥಿಗಳು ಒಟ್ಟಿಗೆ ಆ ಮನೆಯಲ್ಲಿ ವಾಸ್ತವ್ಯ ಹೂಡಲು ಸಾಧ್ಯವೇ ಎನ್ನುವುದರ ಬಗ್ಗೆ ಒಂದು ನಿರ್ಧಾರವನ್ನು ಕೈಗೊಳ್ಳುವಂತೆ ಕೇಳಿಕೊಂಡಳು. ಅದು ಕಷ್ಟವಾದರೆ, ಸ್ವಾಮೀಜಿಯವ

ರನ್ನು ಮನೆಯ ಹತ್ತಿರವಿರುವ ಒಂದು ಹೊಸ ಹೊಟೆಲ್ಲಿನಲ್ಲಿ ವಾಸ್ತವ್ಯಹೂಡುವುದಕ್ಕೆ ವ್ಯವಸ್ಥೆ ಮಾಡಬಹುದು ಎಂದೂ ಸಲಹೆ ಇತ್ತಳು. ಬೆಳಗಿನ ತಿಂಡಿಗೆ ಅರ್ಧಗಂಟೆಗೆ ಮೊದಲು ನಮ್ಮ ತಾತ ಪೋಷಾಕುಗಳನ್ನು ಧರಿಸಿಕೊಂಡರು. ದಿನಪತ್ರಿಕೆಯನ್ನು ಓದಲು ಮನೆಯ ಗ್ರಂಥಾಲಯಕ್ಕೆ ಹೋದರು. ಅಲ್ಲಿ ಸ್ವಾಮೀಜಿಯವರನ್ನು ಕಂಡರು. ಬೆಳಗಿನ ತಿಂಡಿಯನ್ನು ಅತಿಥಿಗಳಿಗೆ ನೀಡುವ ಮೊದಲೇ ನನ್ನ ಅಜ್ಜಿಯ ಹತ್ತಿರ ಬಂದು ಹೇಳಿದರು: ''ಎಮಿಲಿ, ನನ್ನ ಎಲ್ಲ ಅತಿಥಿಗಳೂ ಮನೆ ಬಿಟ್ಟುಹೋದರೂ ನಾನು ಲೆಕ್ಕಿಸುವುದಿಲ್ಲ. ಈ ಭಾರತೀಯನು ನಮ್ಮ ಮನೆಗೆ ಈವರೆಗೆ ಭೇಟಿ ಕೊಟ್ಟವರಲ್ಲೆಲ್ಲ ಅತ್ಯಂತ ಬುದ್ಧಿಶಾಲಿ; ಬಹಳ ಆಕರ್ಷಕ ವ್ಯಕ್ತಿ. ಈತನು ತನಗೆ ಇಷ್ಟಬಂದಷ್ಟು ದಿನಗಳ ಕಾಲ ಈ ಮನೆಯಲ್ಲಿ ನೆಲೆಸಬಹುದು.'' ಈ ಮೂಲಕ ಇವರಿಬ್ಬರ ನಡುವಿನ ಹಾರ್ದಿಕ ಸ್ನೇಹ ಆರಂಭವಾಯಿತು. ಅದು ಎಷ್ಟರಮಟ್ಟಿಗೆ ಬೆಳೆಯಿತೆಂದರೆ, ಒಂದು ದಿನ ಚಿಕಾಗೋದ ಕ್ಲಬ್ ಒಂದರಲ್ಲಿ ನನ್ನ ತಾತನ ಸ್ನೇಹಿತರ ಗುಂಪಿಗೆ ಭಾಷಣಮಾಡುತ್ತ ಸ್ವಾಮಿ ವಿವೇಕಾನಂದರು ಉದ್ಗರಿಸಿದರು: 'ನಾನು ಭೇಟಿಮಾಡಿದವರಲ್ಲೆಲ್ಲ ಮಿಸ್ಟರ್ ಲಯಾನ್ ಅವರು ಕ್ರೈಸ್ತನಂತಹ ದಿವ್ಯವ್ಯಕ್ತಿ ಎಂದು ನಾನು ನಂಬುತ್ತೇನೆ.' ಇದನ್ನು ಕೇಳಿದ ನನ್ನ ತಾತನಿಗೆ ಅಚ್ಚರಿಯಾಯಿತು ಮಾತ್ರವಲ್ಲ, ಕಸಿವಿಸಿಯೂ ಆಯಿತು.'' ಹೀಗೆ ಕಾರ್ನೆಲಿಯಾ ಕಾಂಗರ್ ಸುದೀರ್ಘವಾಗಿ ತನ್ನ ನೆನಪುಗಳನ್ನು ಹೇಳಿಕೊಳ್ಳುತ್ತಾಳೆ.

ಇದೇ ಸಮಯದಲ್ಲಿ ಸ್ವಾಮಿ ವಿವೇಕಾನಂದರು ಅಮೆರಿಕದ ಬೌದ್ಧಿಕ ಸಮುದಾಯವನ್ನು ಕೂಡ ಆಕರ್ಷಿಸಿದ್ದರು. ಅಂದಿನ ಕಾಲದ ಪ್ರಸಿದ್ಧ ವಿಜ್ಞಾನಿಗಳು ಸ್ವಾಮೀಜಿಯವರ ಜೊತೆಗೆ ಸಂಭಾಷಣೆಯನ್ನು ನಡೆಸಿದರು. ಅವರಲ್ಲಿ ಲಾರ್ಡ್ ಕೆಲ್ವಿನ್, ಪ್ರೊಫೆಸರ್ ವಾನ್ ಹೆಲ್ಮ್ ಹೋಲ್ಟ್ಜ ಮತ್ತು ಅರಿಟನ್ ಹೊಪಿಟಾಲಿಯಾ ಮುಂತಾದವರು ಸೇರಿದ್ದರು. ಇವರನ್ನೆಲ್ಲ ಸ್ವಾಮೀಜಿ ತಮ್ಮ ಒಬ್ಬ ಸ್ನೇಹಿತರು ಚಿಕಾಗೋದ ಮನೆಯಲ್ಲಿ ನೀಡಿದ ಔತಣ ಕೂಟದಲ್ಲಿ ಭೇಟಿಯಾಗಿದ್ದರು.

ಇದಲ್ಲದೆ, ಸ್ವಾಮೀಜಿ ಅಂದಿನಕಾಲದ ಅತ್ಯಂತ ಪ್ರಸಿದ್ಧ ಸಂದೇಹವಾದಿ (agnostic) ಮತ್ತು ಭಾಷಣಕಾರನಾಗಿದ್ದ ರಾಬರ್ಟ್ ಗ್ರೀನ್ ಇಂಗರ್‌ಸಾಲ್‌ನನ್ನು ಭೇಟಿಮಾಡಿದರು. ಈತನು ಕ್ರೈಸ್ತಧರ್ಮವನ್ನು ಕಟುವಾಗಿ ಟೀಕಿಸುತ್ತಿದ್ದನು. ಶ್ರದ್ಧಾವಂತ ಕ್ರೈಸ್ತರ ಕೋಪಕ್ಕೆ ಗುರಿಯಾಗಿದ್ದನು. ಏಕೆಂದರೆ ಇಂಗರ್‌ಸಾಲನು ಕ್ರೈಸ್ತಮತದ ಮೂಢನಂಬಿಕೆಗಳನ್ನು ಮತ್ತು ಕಂದಾಚಾರಗಳನ್ನು ವಿರೋಧಿಸುತ್ತಿದ್ದನು. ಅವುಗಳು ವೈಜ್ಞಾನಿಕ ಮನೋಭಾವಕ್ಕೆ ವಿರುದ್ಧವಾದುವು ಎಂದು ಪ್ರತಿಪಾದಿಸಿದನು. ಇವನ ಭಾಷಣಗಳಿಗೆ ನೂರಾರು ಜನರು ಸೇರುತ್ತಿದ್ದರು. ಅಮೆರಿಕದ ಪ್ರಸಿದ್ಧ ಭಾಷಣಕಾರನಾಗಿದ್ದನು ಇಂಗರ್‌ಸಾಲ್. ಸ್ವಾಮಿ ವಿವೇಕಾನಂದರೇ ತಮ್ಮ ಒಂದು ಪತ್ರದಲ್ಲಿ ಬರೆಯುವಂತೆ, ಆಗಿನ ಕಾಲಕ್ಕೆ ಸುಮಾರು ೫೦೦-೬೦೦ ಡಾಲರುಗಳನ್ನು ತನ್ನ ಪ್ರತಿಯೊಂದು ಭಾಷಣಕ್ಕೂ ಸಂಪಾದಿಸುತ್ತಿದ್ದನು. ಸ್ವಾಮೀಜಿಗೆ ಆತನ ಧರ್ಮವಿರೋಧಿ ಧೋರಣೆ ಇಷ್ಟವಾಗಲಿಲ್ಲವಾದರೂ, ಆತನ ಪ್ರಾಮಾಣಿಕತೆಯನ್ನು ಅವರು ಮೆಚ್ಚಿಕೊಂಡಿದ್ದರು. ಮುಂದೊಮ್ಮೆ ಸ್ವಾಮೀಜಿ ತಾವು ಇಂಗರ್‌ಸಾಲಿನ ಜೊತೆಗೆ ನಡೆಸಿದ ಸಂಭಾಷಣೆಯನ್ನು ಲಂಡನ್ನಿನ ತಮ್ಮ ಒಂದು ಪ್ರವಚನದಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ:

''ಅಮೆರಿಕೆಯಲ್ಲಿ ಒಬ್ಬ ಪ್ರಸಿದ್ಧ ಸಂದೇಹವಾದಿಯಿದ್ದನು. ಅವನೊಬ್ಬ ಉತ್ತಮಕುಲಕ್ಕೆ ಸೇರಿದ ವ್ಯಕ್ತಿ. ಬಹಳ ಒಳ್ಳೆಯ ಗುಣ ಅವನದು. ಇದಲ್ಲದೆ ಬಹಳ ಪರಿಣತ ಭಾಷಣಕಾರನು ಕೂಡ. ಆತನು ಧರ್ಮದ ಬಗ್ಗೆ ಭಾಷಣ ಮಾಡುವನು; ಅದು ವ್ಯರ್ಥವೆಂದು ಜರೆಯುವನು; ನಾವು ಪರಲೋಕಗಳ ಗೊಡವೆಗೆ ಹೋಗುವುದಾದರೂ ಏತಕ್ಕೆ ಎಂದು ಪ್ರಶ್ನಿಸುವನು. ಇದಕ್ಕೆ ಒಂದು ಉದಾಹರಣೆಯನ್ನು ಅವನು ನೀಡುತ್ತಾನೆ. ನಮ್ಮ ಹತ್ತಿರ ಒಂದು ಕಿತ್ತಳೆ ಹಣ್ಣು ಇದೆ. ನಾವು ಅದರ ರಸವನ್ನೆಲ್ಲ ಹಿಂಡಿತೆಗೆದು ಕುಡಿಯಲು ಬಯಸುತ್ತೇವೆ. (ಅದರಂತೆಯೇ ಜಗತ್ತಿನ ಸುಖವನ್ನು ನಾವು ಈ ಜನ್ಮದಲ್ಲಿಯೇ ಅನುಭವಿಸಬೇಕು.) ನಾನು ಅವನನ್ನು ಒಮ್ಮೆ ಭೇಟಿಯಾದೆ. ನಾನು ಅವನಿಗೆ ಹೇಳಿದೆ: 'ನಾನು ನಿನ್ನ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನನ್ನದೂ ಒಂದು ಹಣ್ಣು ಇದೆ. ನಾನು ಕೂಡ ಹಣ್ಣಿನಿಂದ ರಸವನ್ನು ಪೂರ್ಣವಾಗಿ ತೆಗೆದು ಕುಡಿಯಲು ಇಚ್ಛಿಸುತ್ತೇನೆ. ಇಲ್ಲಿ ವ್ಯತ್ಯಾಸವಿರುವುದು ಹಣ್ಣಿನ ಆಯ್ಕೆಯಲ್ಲಿ. ನಿನ್ನದು ಕಿತ್ತಳೆ. ನಾನು ಬಯಸುವುದು ಮಾವಿನ ಹಣ್ಣು. ಈ ಜಗತ್ತಿನಲ್ಲಿ ಬದುಕನ್ನು ನಡೆಸುತ್ತ, ತಿಂದು-ಕುಡಿದು, ಅಲ್ಪಸ್ವಲ್ಪ ವೈಜ್ಞಾನಿಕ ಜ್ಞಾನವನ್ನು ಪಡೆದುಕೊಂಡರೆ ಸಾಕು ಎಂದು ನೀನು ಭಾವಿಸುತ್ತೀಯೆ... ಇದಕ್ಕೆ ಬದಲಾಗಿ, ನಾನು ವಸ್ತುಗಳ ಸಾರಸರ್ವಸ್ವವನ್ನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ. ಅದರ ಅಂತರಾಳವನ್ನು ತಿಳಿಯಲು ಬಯಸುತ್ತೇನೆ... ನಿನ್ನ ಅಧ್ಯಯನವು ಈ ಜೀವನದ ಅಭಿವ್ಯಕ್ತಿಗೆ ಮಾತ್ರವೇ ಸೀಮಿತವಾಗಿದೆ, ನನ್ನದಾದರೋ ಜೀವನವನ್ನೇ ಅಧ್ಯಯನ ಮಾಡುವುದಾಗಿದೆ... ನಾನು ಈ ಜನ್ಮದ ರಹಸ್ಯವನ್ನು ತಿಳಿಯಬೇಕಾಗಿದೆ, ಇದರ ಸಾರಸರ್ವಸ್ವವನ್ನು ಅರಿಯಬೇಕಾಗಿದೆ. ಈ ಜೀವನವು ಕೆಲಸಮಾಡುವುದು ಹೇಗೆ, ಅದರ ಅಭಿವ್ಯಕ್ತಿಗಳು ಯಾವುವು ಎಂದಷ್ಟೇ ನಾನು ನೋಡುವುದಿಲ್ಲ. ನನಗೆ ಬೇಕಾಗಿರುವುದು ಎಲ್ಲವೂ 'ಏಕೆ' ಉಂಟಾಗಿದೆ ಎನ್ನುವುದು. ಅವು 'ಹೇಗೆ' ಎನ್ನುವುದನ್ನು ನಾನು ಮಕ್ಕಳಿಗೆ ಬಿಡುತ್ತೇನೆ.' ''

ಸ್ವಾಮೀಜಿಯವರ ಈ ಅಭಿಪ್ರಾಯವು ತನ್ನ ಪ್ರತಿಪಾದನೆಯಂತೆಯೇ ಧರ್ಮಗಳ ಕಂದಾಚಾರವನ್ನು ಬದಿಗೊತ್ತುತ್ತದೆ ಎಂದು ಇಂಗರ್‌ಸಾಲನು ಒಡನೆ ಅರಿತುಕೊಂಡನು. ತನ್ನಂತೆಯೇ ಸ್ವಾಮಿ ವಿವೇಕಾನಂದರು ಕೂಡ ಒಬ್ಬ ಕ್ರಾಂತಿಕಾರರು ಎಂದು ಅವನು ಗುರುತಿಸಿದನು. ಸ್ವಾಮೀಜಿಗೆ ಎಚ್ಚರಿಕೆ ಕೊಟ್ಟನು: ''ನೀವೇನಾದರೂ ಐವತ್ತು ವರ್ಷಗಳ ಹಿಂದೆ ಈ ದೇಶಕ್ಕೆ ಪ್ರವಚನ ಕಾರ್ಯಕ್ಕೆ ಬಂದಿದ್ದರೆ, ನಿಮ್ಮನ್ನು ಇಲ್ಲಿನ ಜನರು ನೇಣು ಹಾಕುತ್ತಿದ್ದರು ಇಲ್ಲವೇ ಜೀವಂತವಾಗಿ ಸುಟ್ಟುಹಾಕುತ್ತಿದ್ದರು. ಅಥವಾ ಕಲ್ಲು ಎಸೆದು ಊರುಗಳಿಂದ ಓಡಿಸಿಬಿಡುತ್ತಿದ್ದರು.''

೧೮೯೩ರಲ್ಲಿಯೂ ಕಟ್ಟಾ ಸಾಂಪ್ರದಾಯಿಕ ವಲಯಗಳಲ್ಲಿ ಸ್ವಾಮಿ ವಿವೇಕಾನಂದರಿಗೆ ಸ್ವಾಗತವೇನೂ ಸಿಗುತ್ತಿರಲಿಲ್ಲ. ಇಷ್ಟಾದರೂ ಅವರು ಪೂರ್ಣ ಸ್ವತಂತ್ರರಾಗಿ ಎಲ್ಲೆಡೆ ಸಂಚಾರ ಮಾಡುತ್ತಿದ್ದರು; ಸುತ್ತಮುತ್ತ ನಡೆಯುತ್ತಿರುವುದನ್ನು ನಿರೀಕ್ಷಿಸುತ್ತಿದ್ದರು; ತಾವೂ ಸಾವಿರ ಪ್ರಶ್ನೆಗಳನ್ನು ಕೇಳುತ್ತ ಕಲಿತುಕೊಳ್ಳುತ್ತಿದ್ದರು. ಹಾಗೆಯೇ ತಮ್ಮ ಪ್ರಭಾವವನ್ನು ಎಲ್ಲೆಡೆ ಬೀರುತ್ತಿದ್ದರು. ಸೆಪ್ಟೆಂಬರ್ ೧೮೯೪ರ ಚಿಕಾಗೋ ಇಂಟರ್ ಓಷನ್ ಎನ್ನುವ ಪತ್ರಿಕೆಯು ಸ್ವಾಮೀಜಿಯವರ ಬಗ್ಗೆ ಒಂದು ಲೇಖನವನ್ನು ಪ್ರಕಟಿಸಿತು:

''..ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ನಂತರವೂ ಹಲವಾರು ತಿಂಗಳುಗಳ ಕಾಲ ಚಿಕಾಗೋ ನಗರದಲ್ಲಿಯೇ ಉಳಿದುಕೊಂಡಿದ್ದಾರೆ. ಅವರು ಶೈಕ್ಷಣಿಕ ಸಂಸ್ಥೆಗಳ ಬಗ್ಗೆ ಅಧ್ಯಯನವನ್ನು ನಡೆಸುತ್ತಿದ್ದಾರೆ. ಇದಲ್ಲದೆ ನಾಗರಿಕತೆಯ ಭೌತಿಕ ಪ್ರಗತಿಯನ್ನು ಕುರಿತಾಗಿ ಪ್ರಶ್ನೆಗಳನ್ನು ಎತ್ತಿಕೊಂಡು ಅಧ್ಯಯನವನ್ನು ನಡೆಸುತ್ತಿದ್ದಾರೆ. ಇವರ ಉದ್ದೇಶ ತಮ್ಮ ದೇಶದ ಜನರಿಗೆ ಅಮೆರಿಕೆಯಲ್ಲಿನ ಈ ವಿಷಯಗಳ ಬಗ್ಗೆ ಮನಗಾಣಿಸುವುದು. ಇದೇ ಕಾಲದಲ್ಲಿ, ಅವರು ಇಲ್ಲಿನ ದೇಶದ ಜನರಿಗೆ ತಮ್ಮ ದೇಶದ ಜನರ ನೈತಿಕತೆ ಮತ್ತು ಆಧ್ಯಾತ್ಮಿಕತೆಯ ಕುರಿತಾದ ಜ್ಞಾನವನ್ನು ನೀಡಲು ಬಂದಿದ್ದಾರೆ.''

ನಿಜಕ್ಕೂ ಸರ್ವಧರ್ಮ ಸಮ್ಮೇಳನದ ನಂತರ ಸ್ವಾಮೀಜಿ ಚಿಕಾಗೋ ನಗರದಲ್ಲಿ ಉಳಿದುಕೊಂಡು, ಗಂಭೀರವಾದ ಅಧ್ಯಯನವನ್ನು ನಡೆಸುತ್ತಿದ್ದರು. ಆ ಕಾಲದಲ್ಲಿ ಚಿಕಾಗೋ ನಗರವು ತನ್ನ ಯೌವನಾವಸ್ಥೆಯಲ್ಲಿ ಇತ್ತು. ಇಲ್ಲಿನ ಜನರು ಉತ್ಸಾಹ ಭರಿತರಾಗಿದ್ದರು; ಬಹಳಷ್ಟು ಪರಿಶ್ರಮ ಪಡುತ್ತಿದ್ದರು. ಜನಸಂಖ್ಯೆ ಅಪಾರ ಪ್ರಮಾಣದಲ್ಲಿ ಬೆಳೆಯುತ್ತಿತ್ತು. ಕಾರ್ಖಾನೆಗಳು, ಉದ್ಯಮಗಳು ಅಭಿವೃದ್ಧಿಯಾಗುತ್ತಿದ್ದವು. ವ್ಯಾಪಾರ-ವಾಣಿಜ್ಯಗಳು ಬೆಳೆಯುತ್ತಿದ್ದವು. ರೈಲ್ವೇ ಮಾರ್ಗಗಳು, ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಿದ್ದವು. ಚಿಕಾಗೋ ನಗರದಲ್ಲಿ 'ಆರ್ಟ್ ಇನ್ಸ್ಟಿಟ್ಯೂಟ್' (ಕಲಾ ಭವನ) ಕೂಡ ತಲೆ ಎತ್ತಿತ್ತು. ಅಲ್ಲಿಯೇ ಸರ್ವಧರ್ಮ ಸಮ್ಮೇಳನ ನಡೆದದ್ದು. ಇದಲ್ಲದೆ, ಅಕ್ಟೋಬರ್ ೩೧ರವರೆಗೆ ನಡೆದ ಕೊಲಂಬಿಯನ್ ವಸ್ತುಪ್ರದರ್ಶನವು ೧೯ನೆಯ ಶತಮಾನದ ಅಮೆರಿಕದ ಸರ್ವಾಂಗೀಣ ಆರ್ಥಿಕ ಪ್ರಗತಿಯ ನೇರ ನೋಟವನ್ನು ಸ್ವಾಮೀಜಿಯವರಿಗೆ ಮಾಡಿಸಿತು.

ಸ್ವಾಮೀಜಿ ಆ ಕಾಲದಲ್ಲಿ ಹಲವಾರು ಶಾಲೆಗಳಿಗೆ ಭೇಟಿ ಕೊಟ್ಟರು. ಇವುಗಳಲ್ಲಿ ಕರ್ನಲ್ ಫ್ರಾನ್ಸಿಸ್ ವೇಲ್ಯಾಂಡ್ ಪಾರ್ಕರ್ ಅವರು ನಡೆಸುತ್ತಿದ್ದ ಶಾಲೆಯೂ ಒಂದು. ಪಾರ್ಕರ್ ಅವರು ಪ್ರಗತಿಪರ ಶಾಲೆಗಳನ್ನು ಆ ಕಾಲದಲ್ಲಿಯೇ ನಡೆಸುತ್ತಿದ್ದರು. ೧೮೯೩ರಲ್ಲಿ ಬೋಸ್ಟನ್ ನಗರದಲ್ಲಿ ಮತ್ತು ನಂತರ ಚಿಕಾಗೋದಲ್ಲಿ ಇವರು ತಮ್ಮ ಶೈಕ್ಷಣಿಕ ತತ್ತ್ವಗಳ ಆಧಾರದ ಮೇಲೆ ಹಲವಾರು ಶಾಲೆಗಳನ್ನು ನಡೆಸುತ್ತಿದ್ದರು. ಸ್ವಾಮೀಜಿ ಆ ಕಾಲದಲ್ಲಿ ಶಾಲೆಗಳ ಬಗ್ಗೆ ಅಧ್ಯಯನವನ್ನು ನಡೆಸುತ್ತಿದ್ದರು. ಅವರ ಈ ಭೇಟಿಯ ಬಗ್ಗೆ ನಮಗೆ ಅಷ್ಟು ತಿಳಿದಿಲ್ಲ. ಆದರೆ ಆ ಶಾಲೆಯಲ್ಲಿ ಓದುತ್ತಿದ್ದ ಸಣ್ಣ ಹುಡುಗಿಯೊಬ್ಬಳು ತನ್ನ ನೆನಪುಗಳನ್ನು ಬರೆದಿದ್ದಾಳೆ. ಅವಳ ಹೆಸರು ಹೆನ್ರಿಟಾ ಹೋಮ್ಸ್ ಎಂದು. ಅವಳ ನೆನಪುಗಳು ಮೊದಲ ಬಾರಿಗೆ 'ಪ್ರಬುದ್ಧ ಭಾರತ' ಪತ್ರಿಕೆಯ ಸೆಪ್ಟೆಂಬರ್ ೧೯೩೩ರ ಸಂಚಿಕೆಯಲ್ಲಿ ಪ್ರಕಟವಾದುವು. ಆಕೆ ಹೀಗೆ ಬರೆಯುತ್ತಾಳೆ:

''ನನ್ನ ಪಾಲಿಗೆ ಸ್ವಾಮಿ ವಿವೇಕಾನಂದರೆಂದರೆ 'ಯಾವತ್ತೂ ನೆನಪಿನಲ್ಲಿ ಉಳಿಯುವ ವಿವೇಕಾನಂದರೇ' ಆಗಿದ್ದಾರೆ. ಅವರನ್ನು ನಾನು ದಿಟ್ಟಿಸಿ ನೋಡಿದ್ದು ಕೆಲವು ಕ್ಷಣಗಳು ಮಾತ್ರ. ಅದು ನಡೆದಿದ್ದು ನಾನು ಇನ್ನೂ ಮಗುವಾಗಿದ್ದಾಗ. ಆಗ ನಾನು ಕರ್ನಲ್ ಫ್ರಾನ್ಸಿಸ್ ವೇಲ್ಯಾಂಡ್ ಪಾರ್ಕರ್ ನಡೆಸುತ್ತಿದ್ದ ಶಾಲೆಯೊಂದರಲ್ಲಿ ವಿದ್ಯಾರ್ಥಿನಿಯಾಗಿದ್ದೆನು. ಅವರು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದರು. ಅವರು ಶೈಕ್ಷಣಿಕ ಕ್ಷೇತ್ರದ ಒಬ್ಬ ಪ್ರವಾದಿಯೆಂದೇ ಪರಿಗಣಿಸಲ್ಪಟ್ಟಿದ್ದರು. ಅವರು ನಡೆಸುತ್ತಿದ್ದ ಶೈಕ್ಷಣಿಕ ಕಾರ್ಯ ದೂರದೂರದ ದೇಶಗಳಲ್ಲಿ ಮನೆಮಾತಾಗಿತ್ತು. ಹೀಗಾಗಿ ವಿದೇಶಗಳಿಂದ ಕೂಡ ವಿದ್ಯಾರ್ಥಿಗಳು ಬಂದು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಭಾರತದಿಂದ ಬಂದ ಒಂದು ಹಿಂದೂ ಕುಟುಂಬದ ಹುಡುಗನು ಕೂಡ ವಿದ್ಯಾರ್ಥಿಯಾಗಿ ನನ್ನ ಶಾಲೆಗೆ ಸೇರಿಕೊಂಡಿದ್ದ.

''ಪ್ರತಿನಿತ್ಯ ಶಾಲೆಯ ಎಲ್ಲ ಮಕ್ಕಳೂ ಪ್ರಾರ್ಥನಾ ಮಂದಿರದಲ್ಲಿ ಸೇರುತ್ತಿದ್ದರು. ಒಮ್ಮೊಮ್ಮೆ ಈ ಸಮಯದಲ್ಲಿ ಗಣ್ಯವ್ಯಕ್ತಿಗಳ ಭಾಷಣವನ್ನು ಕೂಡ ಆಯೋಜಿಸಲಾಗುತ್ತಿತ್ತು. ಒಂದು ದಿನ ಈ ಸಮಯದಲ್ಲಿ ಎತ್ತರದ ವ್ಯಕ್ತಿತ್ವವುಳ್ಳ ಪಾರ್ಕರ್ ಅವರು ಕಾಣಿಸಿಕೊಂಡರು. ಅವರನ್ನು ನಾವು ಬಹಳ ಸಂತೋಷಗೊಂಡೆವು. ಅವರು ಉದ್ದನೆಯ ಹಳದಿಬಣ್ಣದ ಪೋಷಾಕನ್ನು ಧರಿಸಿರುವ ಮತ್ತು ತಲೆಯ ಮೇಲೆ ರುಮಾಲನ್ನು ಸುತ್ತಿಕೊಂಡಿರುವ ಆಕರ್ಷಕ ವ್ಯಕ್ತಿಯೊಬ್ಬರನ್ನು ಕರೆದುಕೊಂಡು ಬಂದಿದ್ದರು. ನಾವೆಲ್ಲರೂ ಪ್ರಾರ್ಥನಾಗೀತೆಯನ್ನು ಹಾಡಿದೆವು. ಕರ್ನಲ್ ಪಾರ್ಕರ್ ದೇವತಾಪ್ರಾರ್ಥನೆಯನ್ನು ಮಾಡಿದರು. ಅನಂತರ ಸ್ವಾಮೀಜಿ ನಮ್ಮನ್ನೆಲ್ಲ ಉದ್ದೇಶಿಸಿ ಭಾಷಣ ಮಾಡಿದರು. ಅನಂತರ, ಪಾರ್ಕರ್ ಮತ್ತು ಸ್ವಾಮೀಜಿ ಇಬ್ಬರೂ ವಿದ್ಯಾರ್ಥಿಗಳ ಗುಂಪಿನ ನಡುವೆ ಹಾದುಹೋದರು. ಆಗ ನಾನು ಮೊದಲೇ ಉಲ್ಲೇಖಿಸಿದ ಹಿಂದೂ ಹುಡುಗನು ಸ್ವಾಮಿಗಳಿಗೆ ತಲೆಬಾಗಿದನು. ಅವರ ಪೋಷಾಕನ್ನು ಸ್ಪರ್ಶಿಸಿದನು. ತದನಂತರ ನಾನು ಅವನಿಗೆ ಪಿಸುಮಾತಿನಲ್ಲಿ ಕೇಳಿದೆನು: ''ಏನೇನಿದು? ಹೀಗೇಕೆ ಮಾಡಿದೆ?'' ಅದಕ್ಕೆ ಆ ಹುಡುಗನು ಉತ್ತರಿಸಿದನು: ''ಇವರು ಸ್ವಾಮಿ ವಿವೇಕಾನಂದರು, ನನ್ನ ದೇಶದ ಬಹುದೊಡ್ಡ ಸಂತರು.'' ಅದಕ್ಕೆ ನಾನು, ''ಈ ಕಾಲದಲ್ಲಿ ಸಂತರು ಯಾರೂ ಇರುವುದಿಲ್ಲ'' ಎಂದು ಹೇಳಿದೆನು. ಅದಕ್ಕೆ ಅವನು ಉತ್ತರಿಸಿದನು: **''ಆದರೆ ಭಾರತದಲ್ಲಿ ಇಂದಿಗೂ ಸಂತರು ಇದ್ದಾರೆ.''**

*(ಮುಂದುವರಿಯುವುದು)*